**ದಿಃ20.03.2017ರಂದು ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ವಾದಿಯ ಪರ ಶ್ರೀ ಕೆವಿಎಸ್ ವಕೀಲರಿಂದಃ**

ನಾನು ಅರ್ಜಿದಾರ ಇದ್ದು, ನನ್ನ ಮುಖ್ಯವಿಚಾರಣೆ ಬಗ್ಗೆ ಪ್ರಮಾಣಪತ್ರ ಸಲ್ಲಿಸಿದ್ದೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ಅಂಶಗಳು ನಿಜವಿರುತ್ತದೆ. ಪ್ರಮಾಣಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ನನ್ನ ತಂದೆ ಮಾಸ್ತಿಗೌಡ ಅಲಿಯಾಸ್ ಬಿ.ಚಿಕ್ಕಣ್ಣರವರು ದಿಃ07-01-2004 ರಂದು ಮಾಡಿದ ಮರಣ ಶಾಸನ ಪತ್ರ ಹಾಜರುಪಡಿಸಿದ್ದೇನೆ, ಅದನ್ನು ಪುರಾವೆಗೊಳಪಟ್ಟು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ಅಲ್ಲದೆ ದಿಃ05-02-2004 ರಂದು ಮಾಡಿದ ಇನ್ನೊಂದು ಮರಣ ಶಾಸನ ಪತ್ರ ಹಾಜರುಪಡಿಸಿದ್ದು ಅದನ್ನು ಪುರಾವೆಗೊಳಪಟ್ಟು ನಿಶಾನೆ ಪಿ-2 ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,
(ರವೀಂದ್ರ ಹೆಗಡೆ)
(ಪ್ರಭಾರ) 9ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.

**ದಿಃ13.06.2017ರಂದು ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆಃ ಶ್ರೀ ಕೆವಿಎಸ್ ವಕೀಲರಿಂದಃ**

ನನ್ನ ತಂದೆ ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು.

**ಪಾಟಿಸವಾಲುಃ ಎದುರುದಾರರ ಪರವಾಗಿ** ಃ(ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಪಾಟೀಸವಾಲನ್ನು ಮುಂದೂಡಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

(ಎಂ.ಹೆಚ್.ಶಾಂತ)
9ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.

ದಿಃ26.07.2017ರಂದು ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು.

ಪಾಟಿಸವಾಲುಃ ಎದುರುದಾರರ ಪರವಾಗಿ ಶ್ರೀ ವಿ.ಆರ್.ಬಿ. ವಕೀಲರಿಂದಃ

ನಾನು ಈಗ ಯಶವಂತಪುರದಲ್ಲಿ ವಾಸವಾಗಿದ್ದೇನೆ. ನಾನು ವಾಸವಾಗಿರುವ ಮನೆಯ ವಿಳಾಸವನ್ನು ಪ್ರಮಾಣಪತ್ರದಲ್ಲಿ ತಿಳಿಸಿರುತ್ತೇನೆ. ಸಾಕ್ಷಿಗೆ ಪ್ರಮಾಣಪತ್ರವನ್ನು ತೋರಿಸಿದಾಗ ಅವರು ಪ್ರಮಾಣಪತ್ರದಲ್ಲಿ ತನ್ನ ಮನೆಯ ವಿಳಾಸವನ್ನು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಈಗ ಯಶವಂತಪುರದ ಮನೆ ನಂ.8/1, 2ನೇ ಮೈನ್, 4ನೇ ಕ್ರಾಸ್, ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ.

ನಾನು ಹಾಗೂ ನನ್ನ ಹೆಂಡತಿ ಸದರಿ ಮನೆಯಲ್ಲಿ ವಾಸವಾಗಿರುತ್ತೇವೆ. ನಾನು, ನನ್ನ ಹೆಂಡತಿ ಕೆ.ಲೀಲಾ ಸದರಿ ಮನೆಯಲ್ಲಿ ವಾಸವಾಗಿರುತ್ತೇವೆ. ಆರ್.ಗುಣಶೀಲ ನನ್ನ ಎರಡನೇ ಹೆಂಡತಿ. 2009ನೇ ಇಸವಿಯಲ್ಲಿ ನನ್ನ ಮದುವೆ ಆರ್.ಗುಣಶೀಲರವರ ಜೊತೆ ಆಗಿರುತ್ತದೆ. 2001ನೇ ಇಸವಿಯಲ್ಲಿ ನನ್ನ ಮದುವೆ ಲೀಲಾರವರೊಂದಿಗೆ ಆಗಿರುತ್ತದೆ. 2010ನೇ ಇಸವಿಯಲ್ಲಿ ನಾನು ಬಿಬಿಎಂಪಿ ಚುನಾವಣೆಯಲ್ಲಿ ಸ್ಪರ್ಧಿಸಿರುತ್ತೇನೆ.

ಪಾಟಿಸವಾಲನ್ನು ವಿರಾಮದ ನಂತರ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

(ಎಂ.ಹೆಚ್.ಶಾಂತ)
9ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.

ದಿಃ26.07.2017ರಂದು ಅಪರಾಹ್ನ ಸಾಕ್ಷಿಯನ್ನು ಪುನಃಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟಿಸವಾಲುಃ ಎದುರುದಾರರ ಪರವಾಗಿ ಶ್ರೀ ವಿ.ಆರ್.ಬಿ. ವಕೀಲರಿಂದಃ

ಗುಣಶೀಲರವರಿಂದ ನನಗೆ ಸಿಂಚನ ಎಂಬ ಮಗಳು ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ದಿಃ29-05-2004 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ದಿಃ13-07-2015 ರಂದು ಈ ಅರ್ಜಿಯನ್ನು ಹಾಕುವ ಸಮಯದಲ್ಲಿ ಎಲ್ಲಾ ಸ್ವತ್ತಿನ ಖಾತೆಯು ನನ್ನ ತಂದೆ ಮಾಸ್ತಿಗೌಡ ಉರುಫ್ ಚಿಕ್ಕಣ್ಣನವರ ಹೆಸರಿನಲ್ಲಿ ಇತ್ತು, ದಿಃ23-05-2015ರಲ್ಲಿ ಆದ ಜಂಟಿ ಖಾತೆಯನ್ನು ಪ್ರಶ್ನಿಸಿ ನಾನು ದಿಃ08-06-2015 ರಂದು ರಿವಿಜನ್ ಅರ್ಜಿಯನ್ನು ಹಾಕಿರುತ್ತೇನೆ ಎಂದರೆ, ಸದರಿ ಅರ್ಜಿಯನ್ನು ಹಾಕಿರುವುದಾಗಿ, ಆದರೆ ದಿನಾಂಕ ನನಗೆ ನೆನಪಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಅರ್ಜಿಯನ್ನು ಹಾಕುವ ಸಮಯದಲ್ಲಿ ಸ್ವತ್ತುಗಳ ಖಾತೆಯು ಜಂಟಿ ಯಾಗಿದ್ದರೂ ಸಹ ನಾನು ಅದನ್ನು ಮರೆಮಾಚಿ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಯಾರ ಹೆಸರಿನಲ್ಲಿ ಖಾತೆ ಇರುತ್ತದೆ ಎಂಬುದರ ಬಗ್ಗೆ ತಿಳಿಸಿರುವುದಿಲ್ಲ. ದಿಃ05-10-1984ರಲ್ಲಿ ನೋಂದಾಯಿತ ಪಾಲು ವಿಭಾಗಪತ್ರದ ಮೂಲಕ ನನ್ನ ತಂದೆಗೆ ಒಟ್ಟು ಕುಟುಂಬದ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿಯು ನೋಂದಾಯಿತ ವಿಭಾಗಪತ್ರವನ್ನು ಮಾಡಿಕೊಂಡಿರುವುದು ಸರಿಯಿರುವುದಾಗಿ, ಆದರೆ ದಿನಾಂಕ ನೆನಪಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ನಾನು, ನನ್ನ ತಾಯಿ ಹಾಗೂ ಅಣ್ಣನ

ಜೊತೆಯಲ್ಲಿ ವಾಸವಾಗಿರುವುದಿಲ್ಲ. ನಾವೆಲ್ಲರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ನನ್ನ ತಾಯಿ ಹಾಗೂ ನನ್ನ ಅಣ್ಣ ಒಂದೇ ಮನೆಯಲ್ಲಿ ಈಗಲೂ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. 2009ರಲ್ಲಿ ಗುಣಶೀಲರನ್ನು ಮದುವೆಯಾದಾಗ ನಾನು ನನ್ನ ತಾಯಿಯೊಂದಿಗೆ ಸಹ ಇರುತ್ತಿದ್ದೆ ಹಾಗೂ ನನ್ನ ಮೊದಲನೆ ಹೆಂಡತಿ ಲೀಲಾ ಜೊತೆಗೂ ಸಹ ಇರುತ್ತಿದ್ದೆನು. ನನ್ನ ಹೆಂಡತಿ ಲೀಲಾ ಹಾಗೂ ನರಸಿಂಹಯ್ಯನವರ ವಿವಾಹ ವಿಚ್ಛೇದನವು ದಿಃ29-04-2015ರಂದು ಆಗಿರುತ್ತದೆ ಎಂದರೆ ಸಾಕ್ಷಿಯು ವಿವಾಹ ವಿಚ್ಛೇದನವಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಾಗಿ, ಆದರೆ ದಿನಾಂಕ, ಇಸವಿ ನನಗೆ ಗೊತ್ತಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

(ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,

(ಎಂ.ಹೆಚ್.ಶಾಂತ)
9ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.